In your interest
& country's interest
BE A REGULAR
READER OF

HARIJAN
Mahatma Gandhi's Paper

Mysore Agent : N. Dasappa,

ಸತ್ಯವಾದಿ

ಅರಮನೆ ಸಿರಸ್ತೇದಾರ್ ಎಂ.ವಿ.ಸುಬ್ಬರಾಯರಿಂದ ಪ್ರತಿಷ್ಠಿತಪಾದ್ದು

Proprietors— Satyavadi Ltd, Mysore

ಬಿ. ಸೆಕ್ಷನ್ 17—6—42

To Let

NEXT CHANGE AT **NEW OPERA TALKIES** (The Beauty Spot of Mysore) MORNING SHOWS

FRGE .
19 th to 22 nd

BUCK PRIVATES



Starring :—R. Balasubramaniyam M. K. Krishnamurthi N. S. Krishna P. C. Venkatesan
V. S. Mani Kolar Rajam Thavamani Devi T. A. Madhuram Baby Rukmini

War

Japan's Vicious Police—I

(By John MacDonald)

HATEFUL JAYS

All over the World small men with a little authority known to be sometimes officious are nasty, but for real rudeness and effrontery the Japaness detective cannot be beaten. His manners are of the worst type, his disregard of chivalry and decent behaviour is notorious, yet faced with a higher authority than himself nobody is more cringing or servile. It really seems as if the soum of Japan had been mobilised to form this branch of the administration.

The number of various police departments is infinite, but it is certain that there is hardly a single part of civilian Japan that is not directly under the supervision of one or more of these men. In the district of Tokyo and its immediate suburbs there were in 1937 over 69,000 officially listed police officers, detectives and clerks.

(to be continued)

ಹಾಲು ಪಾನೀಯಗಳು ನಮ್ಮಲ್ಲಿ ಒಂದು ವಿಶೇಷವೇ ಸರಿ!

ಕೆನೆ, ಬೆಣ್ಣೆ ಅತಿ ಮಧುರವಾದ ಕ್ರೀಮ್, ಮೊಸರು

ಇವುಗಳಿಗೆ ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ.

ಸಿಟಿ ಸನ್ನಿ ಡೈರಿ

ಟೆಲಿಫೋನ್ ನಂಬರು 492
ಹಳೇ ಪೋಸ್ಟಾಫೀಸ್ ರಸ್ತೆ, :: ಮೈಸೂರು.

B
ಅರ್ಧಾಣೆ
"ಎ" ಸೆಕ್ಷನ್
ತಪ್ಪದೆ ಓದಿ

ಪ್ರಜಾಪ್ರತಿನಿಧಿ ಸಭೆ

ಗ್ರಾಮಾಭಿವೃದ್ಧಿ ಕಾರ್ಯ

ಗ್ರಾಮಪುನರುಜ್ಜೀವನ ಕಾರ್ಯವನ್ನು ಭರದಿಂದ ನಡೆಸಬೇಕೆಂದು ಈಗ್ಗೆ ಹಲವು ವರುಷಗಳಿಂದಲೂ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ನ್ಯಾಯವಿಧಾಯಕ ಸಭೆಯಲ್ಲಿಯೂ ಆಗಾಗ ಮಾಡಿರತಕ್ಕ ನಿರ್ಣಯಗಳು, ಅರಿಕೆಗಳು, ಪ್ರಶ್ನೆ ಇತ್ಯಾದಿಗಳ ದೆಸೆಯಿಂದ ಸರ್ಕಾರದವರು ಇಡೀ ಸಂಸ್ಥಾನದೊಳಗಿನ ಗ್ರಾಮಗಳನ್ನೆಲ್ಲಾ "ಮಾದರಿ ಗ್ರಾಮ" ಗಳನ್ನಾಗಿ ಮಾಡಲು ನಿರ್ಧರಿಸಿ, ಅದಕ್ಕಾಗಿ 5 ವರ್ಷಗಳ ಕಾರ್ಯಕ್ರಮವನ್ನು ನಿರ್ಣಯಿಸಿರುವುದು ಸರಿಯಷ್ಟೆ. ಈ ಕಾರ್ಯಕ್ರಮದಲ್ಲಿ ಎಲ್ಲಾ ಕೆಲಸಗಳನ್ನೂ ಸರ್ಕಾರದವರೇ ಮಾಡುತ್ತಾರೆಂದು ನಮ್ಮನಿರೆದೇ ಸಾರ್ವಜನಿಕ ಮುಖಂಡರು ಸಹಾ ಸದರಿ ಕಾರ್ಯಕ್ರಮದಲ್ಲಿ ಸರಕಾರಿ ಅಧಿಕಾರಿಗಳೊಡನೆ ಕಲೆತು ತಮ್ಮ ತಮ್ಮ ಗ್ರಾಮಗಳಲ್ಲಿ ಯಾವಯಾವ ಅನಾನುಕೂಲಗಳಿವೆ? ಅವುಗಳಿಗೆ ಪರಿಹಾರವೇನು, ಬೇಕಾದ ಅನುಕೂಲತೆಗಳೇನು, ಯಾವ ಏರ್ಪಾಡನ್ನು ಮಾಡಿದರಿಂದ ಆ ಗ್ರಾಮಾಭಿವೃದ್ಧಿಯಾಗುವುದೆಂಬಿತ್ಯಾದಿ ವಿಷಯಗಳನ್ನು ಯೋಚನೆ ಮಾಡಿ ಅಗತ್ಯವುಳ್ಳ ಸೂಚನೆಗಳನ್ನು ಕೊಟ್ಟು ಕಾರ್ಯಗಳಲ್ಲಿ ಸಹಕರಿಸಬೇಕೆಂಬ ವಿಷಯವನ್ನು ನಾವು ಈ ಮೊದಲೆ ಹೇಳಿದ್ದೇವೆ.

ಪ್ರತಿಯೊಂದು ಗ್ರಾಮದಲ್ಲಿಯೂ ಅಲ್ಲಿಯ ಜನಗಳ ನಿತ್ಯಜೀವನಕ್ಕೆ ಅಗತ್ಯವುಳ್ಳ ವಿಷಯಗಳಲ್ಲಿ ಜನರಿಗೆ ಯಾವ ಅನಾನುಕೂಲತೆಯೂ ಇರಕೂಡದು. ಸರಕಾರದವರು ಗ್ರಾಮವುನರುಜ್ಜೀವನದ ಕುರಿತು ಹಿಂದೆ 1936 ನೆಯ ನೇ ತಾ|| 9 ರಲ್ಲಿ ಹೊರಡಿಸಿರುವ ನೋಟಿಫಿಕೇಶನ್ನಿನಲ್ಲಿ ಯಾವ ವಿಷಯಗಳು ಇರುತ್ತವೆ ಎಂಬುದು ನಮಗೆ ನೆನಪಿನಲ್ಲಿಲ್ಲ. ಆದರೂ ಸಾಮಾನ್ಯವಾಗಿ ಈಗಿನ ಕಾರ್ಯಕ್ರಮದ ವಿವರಣೆಯು ಸ್ಥೂಲರೂಪನ್ನು ನೋಡಿದರೆ, ರಸ್ತೆಗಳ ಅನುಕೂಲತೆ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯಾಭ್ಯಾಸ, ವೈದ್ಯಸಹಾಯಗಳ ವಿಷಯ ಇತರ ವಿಷಯಗಳಲ್ಲಿ ಹೆಚ್ಚಿನ ಅಸಕ್ತಿಯನ್ನು ಸರಕಾರದವರು ತೋರಿಸಿದಂತೆ ಕಾಣಲಿಲ್ಲ. ಗ್ರಾಮವುನರುಜ್ಜೀವನ ಕಾರ್ಯದಲ್ಲಿ ಅನೇಕ ವಿಷಯಗಳು ಸಮಾವೇಶವಾಗುತ್ತವೆ. ಹಳ್ಳಿಯ ರೈತರಿಗೆ ಎಲ್ಲದಕ್ಕಿಂತಲೂ ಮುಖ್ಯವಾಗಿರುವುದೆಂದರೆ ನೀರಾಗಲು, ಗೊಳ್ಳ, ಮೊದಲಾದವು. ಇದಕ್ಕಾಗಿ ಪ್ರತಿ ಗ್ರಾಮದಲ್ಲಿಯೂ ಒಳ್ಳೆಯ ಬಡಗಿಗಳಿರುವಂತೆ ಮಾಡುವುದು ಅಗತ್ಯವಿದೆ. ಅದರಂತೆ ಕಬ್ಬಿಣಕೆಲಸ ಮಾಡುವವರೂ ಇರಬೇಕು. ಹಾಗೂ ಗ್ರಾಮಗಳಲ್ಲಿನ ಜನಗಳ ಆರ್ಥಿಕ ಉನ್ನತಿಯನ್ನು ಮಾಡಲು ಯತ್ನಿಸುವುದು ಎಲ್ಲದಕ್ಕಿಂತಲೂ ಮುಖ್ಯವಾದುದು. ಹಳ್ಳಿಗಳಲ್ಲಿ ನಾನಾರೀತಿಯ ಕೈಗಾರಿಕೆಗಳನ್ನು ನಡೆಸಬಹುದಾಗಿದೆ. ನೂಲುವುದು ಮತ್ತು ನೇಯುವುದು ಇರಲೇಬೇಕಾದುವುಗಳು. ಸಾಧ್ಯವಿದ್ದ ಗ್ರಾಮಗಳಲ್ಲೆಲ್ಲಾ (Sericulture) ಸಿಲ್ಕು ಗೂಡುಗಳನ್ನು ತಯಾರಿಸುವ ಕೈಗಾರಿಕೆಯನ್ನು ಮಾಡಬಹುದು. ಬೀಡಿ ಸೇದತಕ್ಕ ಜನಗಳು ಈಚೆಗೆ ಎಲ್ಲೆಲ್ಲೂ ಹೆಚ್ಚಾಗಿರುತ್ತಾರೆ. ಸರಕಾರದವರು ಹೊಗೆಸೊಪ್ಪಿನ ವ್ಯಪಸಾಯವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ನಮ್ಮ ಸಂಸ್ಥಾನಕ್ಕೆ ಸಾಧಾರಣವಾಗಿ ಒಂದು ಕೋಟಿಗೆ ಕಡಿಮೆಯಿಲ್ಲದಷ್ಟು ಬೀಡಿಗಳು ಹೊರಗಡೆಯಿಂದ ಬರುತ್ತವೆ. ಈ ಒಂದು ಕೋಟಿ ಬೀಡಿಗಳ ಬೆಲೆ ಸುಮಾರು 15 ಸಾವಿರ ರೂಪಾಯಿಗಳಾಗುತ್ತವೆ. ಅಲ್ಲದೇ ಹತ್ತು ಸಾವಿರ ಜನಗಳಿಗೆ ಕೂಲಿ ಸಿಕ್ಕಿದಂತಾಗುತ್ತದೆ ಈ ಚಿಕ್ಕ ಕೈಗಾರಿಕೆಯಿಂದಲೇ ಸಾಧಾರಣವಾಗಿ ಹತ್ತು ಸಾವಿರ ಮಂದಿಯ ನಿರುದ್ಯೋಗವನ್ನು ಪರಿಹರಿಸಿದಂತಾಗುವುದಲ್ಲದೇ ಒಂದು ಕೋಟಿ ಇಟ್ಟು ಬೀಡಿ ಕಟ್ಟಲು ಮಜೂರಿಯು ಸುಮಾರು ಐದು ಸಾವಿರ ರೂಪಾಯಿಗಳಿಗೆ ಕಡಮೆಯಿಲದಷ್ಟು ನಮ್ಮ ಸಂಸ್ಥಾನದ ಜನಗಳಿಗೆ ಸಿಕ್ಕಿದಂತಾಗುತ್ತದೆ. ಇದು ಒಂದೇ ಒಂದು ದಿನದ ಉತ್ಪನ್ನವು. ಈ ಕೈಗಾರಿಕೆಯನ್ನು ಹಳ್ಳಿಯ ವರಿಂದ ಮಾಡಿಸುವದು ಅನುಕೂಲವಾಗಿದೆ. ಅದಕ್ಕಾಗಿ ಚೆನ್ನಾಗಿ ಬೀಡಿ ಕಟ್ಟುವುದರಿಂದ ಹಳ್ಳಿಯ ಜನಗಳಿಗೆ ತರಬೇತನ್ನು ಕೊಡಿಸಿ ಈ ಕೈಗಾರಿಕೆಯನ್ನು ಪ್ರಚಾರ ಮಾಡಿಸುವುದರಿಂದ ಅನೇಕ ಗ್ರಾಮಗಳ ಜನಗಳಿಗೆ ಜೀವನೋಪಾಯವನ್ನು ಕಲ್ಪಿಸಿಕೊಟ್ಟಂತಾಗುವುದು.

ಇದೇ ರೀತಿಯಲ್ಲಿ ಕೋಳಿಮೊಟ್ಟೆಗಳು ನಮ್ಮ ದೇಶಕ್ಕೆ ಹೊರಗಿನಿಂದ ಅಪಾರವಾಗಿ ಬರುತ್ತದೆ. ಪ್ರತಿ ದಿನವೂ ಒಂದು ಲಕ್ಷಕ್ಕೆ ಕಡಮೆಯಿಲ್ಲದಷ್ಟು ಹೊರಗಿನಿಂದ ಒರುತ್ತಿವೆ. ಈ ಒಂದು ಲಕ್ಷ ಮೊಟ್ಟೆಗಳ ಬೆಲೆಯು ಕಂಡಹಾಗೆ ಮೂರು ಸಾವಿರ ರೂಪಾಯಿಗಳಾಗುತ್ತವೆ. ಹಳ್ಳಿಯವರಿಗೆ ಒಳ್ಳೆಯ ಕೋಳಿಗಳನ್ನು ಒದಗಿಸಿಕೊಟ್ಟು ಮೊಟ್ಟೆಗಳನ್ನು ತಯ್ಯಾರಿಸಿ ಅವುಗಳನ್ನು ಪಾರಾಟಕ್ಕೆ ಕಳುಹಿಸುವ ಏರ್ಪಾಡನ್ನು ಮಾಡಿಸುವುದಾದರೆ ಪ್ರತಿದಿನವೂ ಸಂಸ್ಥಾನದಿಂದ ಹೊರಗೆ ಹೋಗುತಕ್ಕ ಮೂರು ಸಾವಿರ ರೂಪಾಯಿಗಳ ಹಣವು ನಮ್ಮ ಹಳ್ಳಿಯ ಒಡರೈತರಿಗೆ ಸಿಕ್ಕಿದಂತಾಗುತ್ತದೆ. ಇದೇ ರೀತಿಯಲ್ಲಿ ಇನ್ನು ಅನೇಕ ಬಾಬ್ತುಗಳು ಇರುತ್ತವೆ. ಆಯಾಯ ಗ್ರಾಮದವರು ಅಲ್ಲಲ್ಲಿಯ ಅನುಕೂಲತೆಗಳನ್ನು ನೋಡಿ ತಕ್ಕಂತೆ ಕಾರ್ಯಕ್ರಮವನ್ನು ನಿರ್ಣಯಿಸಬೇಕು. ಮುಖ್ಯವಾಗಿ ಗ್ರಾಮಾಭಿವೃದ್ಧಿಕಾರ್ಯಗಳಲ್ಲಿ ರಸ್ತೆ ಭಾವಿ, ಸ್ಥಳ ನೈರ್ಮಲ್ಯ ಮೊದಲಾದುಗಳು ಬೇಕಾಗಿರುವ ಹಾಗೆ ಅದಕ್ಕೆದ್ದಿತಲೂ ಅತ್ಯಗತ್ಯವಾಗಿ ಹಳ್ಳಿಯವರ ಆರ್ಥಿಕ ಸುಧಾರಣೆಯನ್ನು ಮಾಡುವುದು ಅಗತ್ಯವಿದೆ. ಈ ವಿಷಯವನ್ನು ಸಾರ್ವಜನಿಕರೂ ಸರಕಾರದವರೂ ಜೆನ್ನಾಗಿ ಆಲೋಚಿಸಿ ಎಲ್ಲರೂ ಕಲೆತು ಗ್ರಾಮಾಭಿವೃದ್ಧಿಯ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕಾಗಿದೆ.

ಸತ್ಯವಾದಿ ವಾರ ಪತ್ರಿಕೆಗೆ ಚಂದಾದಾರರಾಗಿರಿ

ಪ್ರಜಾಪ್ರತಿನಿಧಿ ಸಭೆ

ಪಕ್ಷ-ಪ್ರತಿಪಕ್ಷಿಗಳು

ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಗಳಂತಹ ದೊಡ್ಡ ದೊಡ್ಡ ಸಭೆಗಳಲ್ಲಿ ಜನಗಳು ಬೇರೆಬೇರೆಯಾಗಿಯೂ ಸ್ವತಂತ್ರವಾಗಿಯೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಾಡಿಸುವುದಕ್ಕಿಂತ ತಮ್ಮ ತಮ್ಮ ಅಭಿಪ್ರಾಯಕ್ಕೆ ಸರಿಬರುವಂತಹ ಜನರಲ್ಲರೂ ಕೂಡಿ ಪಕ್ಷಗಳನ್ನು ರಚಿಸಿ ಆ ಪಕ್ಷಗಳ ಮುಖೇನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಉತ್ತಮವಾದ ಪದ್ಧತಿಯು. ಪಾಶ್ಚಾತ್ಯ ದೇಶಗಳಲ್ಲಿಯೂ ಕೂಡ ಪಕ್ಷಗಳನ್ನು ರಚಿಸಿ ವಾದಿಸುವ ರೂಢಿಯು ಇದ್ದೇ ಇದೆ. ಇಂಗ್ಲೆಂಡಿನಲ್ಲಿಯೂ ಕೂಡಾ ಲೇಬರ್ ಪಾರ್ಟಿ, ಲಿಬರಲ್ ಪಾರ್ಟಿ, ಕನ್ಸರ್ವೇಟಿವ್ ಪಾರ್ಟಿ ಎಂಬಿತ್ಯಾದಿ ಹಲವು ಪಾರ್ಟಿಗಳು ಇವೆ. ಅವೆಲ್ಲಾ ಶಿಸ್ತುಬದ್ಧವಾಗಿವೆ. ಇಂಡಿಯಾ ಅಸೆಂಬ್ಲಿಯಲ್ಲಿಯೂ ಅದೇ ರೀತಿ ಪಾರ್ಟಿಗಳು ಇವೆ ಹೀಗೆ ಪಾರ್ಟಿಗಳನ್ನು ಕಟ್ಟಿಕೊಂಡಿರುವುದು ಈಗಿನ ಕಾಲದಲ್ಲಿ ಒಂದು ಶಿಷ್ಟಾಚಾರವಾಗಿ ಒಂದಿರುತ್ತದೆ. ಈ ಪಾರ್ಟಿ ಕ್ರಮದಿಂದ ಪ್ರಯೋಜನವೂ ಇರುತ್ತದೆ.

ನಮ್ಮ ಮೈಸೂರಿನ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿಯೂ ಪಾರ್ಟಿಗಳು ಇರುತ್ತವೆ. ಪ್ರಥಮದಲ್ಲಿ ಕಾಂಗ್ರೆಸ್ ಪಾರ್ಟಿ ಮತ್ತು ಸ್ವತಂತ್ರವೆಂಬ ಪಾರ್ಟಿಗಳು ಇದ್ದುವು ಮತ್ತೆ ಕೆಲವು ಕಾಲಾನಂತರ ಈ ಎರಡು ಪಾರ್ಟಿಗಳ ಜತೆಗೆ ರಾಷ್ಟ್ರೀಯ ಮಹಾಸಭೆಯೆಂಬುದೊಂದು ಪಾರ್ಟಿಯೂ ಹುಟ್ಟಿತು. ಒಳಕಮುಸ್ಲಿಂಲೀಗ್ ಮತ್ತೆ ಹಿಂದೂ ಮಹಾಸಭೆ ಎಂಬ ಪಕ್ಷಗಳು ಹುಟ್ಟಿ ಈಗ ಅದು ಅಸೆಂಬ್ಲಿಯಲ್ಲಿ ಪಾರ್ಟಿಗಳಾಗಿ ಇರುವದು ಕಂಡುಬರುತ್ತದೆ. ಪಾರ್ಟಿಗಳು ಇರುವುದು ಅಭಿಪ್ರಾಯ ಏಸಮಯ ಸೃಷ್ಟಿಯಿಂದ ಉತ್ತಮವಾದುದಾದರೂ ಆ ಪಾರ್ಟಿಗಳಲ್ಲಿ ಒಂದು ಪಾರ್ಟಿಯವರು ಇನ್ನೊಂದು ಪಾರ್ಟಿಯನ್ನು ವಿರೋಧಿಸುವುದೇ ತಮ್ಮ ಉದ್ದೇಶ ಅಥವಾ ಕಾರ್ಯಕ್ರಮವನ್ನಾಗಿ ಇಟ್ಟುಕೊಂಡಿರಕೂಡದು. ಅಂತಹ ಪಾರ್ಟಿ ರಚನೆಯು ದೇಶದ ಹಿತದೃಷ್ಟಿಯಿಂದ ಖಂಡನೀಯವಾಗಿರುತ್ತದೆ. ನಮ್ಮ ಪ್ರಜಾಪ್ರತಿನಿಧಿ ಸಭೆಯು ಈ ಪಕ್ಷಗಳವರಲ್ಲಿ ಇಂತಹ ವಿರೋಧಭಾವನೆಯೇ ಹೆಚ್ಚಾಗಿ ಎದ್ದುಕಾಣುತ್ತದೆ. ಒಂದು ಪಕ್ಷದವರು ಯಾವುದಾದರೊಂದು ವಿಷಯವನ್ನು ಮುಂದೆ ತಂದರೆ ಆ ವಿಷಯವು ದೇಶಕ್ಕೆ ಕ್ಷೇಮಕರವೋ ಅಪಾಯಕರವೋ ಎಂಬುದನ್ನು ವಿಚಾರಿಸುವುದಕ್ಕಿಂತಲೂ ಇನ್ನೊಂದು ಪಾರ್ಟಿಯನ್ನು ವಿರೋಧಿಸುವುದೇ ತಮ್ಮ ಉದ್ದೇಶ ಅಥವಾ ಕಾರ್ಯಕ್ರಮವಾಗಿ ಇಟ್ಟುಕೊಂಡಿರಕೂಡದು. ಅಂತಹ ಪಾರ್ಟಿ ರಚನೆಯು ದೇಶದ ಹಿತದೃಷ್ಟಿಯಿಂದ ಖಂಡನೀಯವಾಗಿರುತ್ತದೆ.

[ಮುಂದಿನ ಪುಟವನ್ನು ನೋಡಿ]